ವಾಸನೆ....ಬಂಗಲೆಯ ಎಡಭಾಗದತ್ತ ಓಡಿದೆ. ಆ ಒಣಗಿದ ಬಿದಿರು ಮೆಳೆ ಇತ್ತಲ್ಲಾ, ಅದಕ್ಕೆ ಬೆಂಕಿ ಹೊತ್ತಿಕೊಂಡಿತ್ತು. ನೋಡನೋಡುತ್ತಿದ್ದಂತೆ ಪಕ್ಕದ ಸಂಪಿಗೆ ಮರಕ್ಕೂ ಬೆಂಕಿ ತಗುಲಿತ್ತು....' ಎಂದ ಚಂದ್ರಪ್ಪ.

ಮತ್ತೆ ಅರ್ಧ ಗಂಟೆಯೊಳಗೆ ಬೆಂಕಿ ಹತೋಟಿಗೆ ಬಂದಿತ್ತು. ನಿಧಾನವಾಗಿ ಬೆಂಕಿ ನಂದತೊಡಗಿತ್ತು. ಹಸಿರಾಗಿದ್ದ ಮರ ಈಗ ಬೋಳುಬೋಳಾಗಿ ಕರಕಲಾಗಿ ಕಾಣತೊಡಗಿದಾಗ ಎಲ್ಲರಿಗೂ ಸಂಕಟವಾಯಿತು.

ಸಮಯಕ್ಕೆ ಸರಿಯಾಗಿ ಅಗ್ನಿಶಾಮಕ ದಳದವರಿಗೆ ವಿಷಯ ತಿಳಿಸಿದ ನೆನರೆಹೊರೆಯವರಿಗೆ ಧನ್ಯವಾದಗಳನ್ನು ಹೇಳಿದರು ಪುರುಷೋತ್ತಮ್. ಒಂದು ವೇಳೆ ಅಗ್ನಿಶಾಮಕ ದಳದ ಸಿಬ್ಬಂದಿ ಬಂದಿರದಿದ್ದರೆ ಭಾರೀ ಅನಾಹುತವೊಂದನ್ನು ಕೋಟೆ ಬಂಗಲೆ ಎದುರಿಸಬೇಕಿತ್ತು.

ಋತುವಂತೂ ಭಯಭೀತಳಾಗಿ ರಮ್ಯಾಳ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು. ಈ ಎಲ್ಲಾ ವಿದ್ಯಮಾನಗಳು ನಡೆಯುವಾಗ ಕಲಾವತಿ ತಮ್ಮ ಮಗ ಭರತನನ್ನು ಹುಡುಕಿಕೊಂಡು ಹೋದರು. ನಡೆದ ಘಟನೆಗೂ ತನಗೂ ಸಂಬಂಧವೇ ಇಲ್ಲದಂತೆ ಕಾರಂಜಿ ಉದ್ಯಾನವನದ ಕಲ್ಲುಬೆಂಚಿನ ಮೇಲೆ ಕುಳಿತಿದ್ದ ಮಗನನ್ನು ನೋಡಿ ಕಲಾವತಿಗೆ ರೇಗಿತು.

'ಬಂಗಲೆಯೇ ಹೊತ್ತಿಕೊಂಡು ಉರೀತಿದೆ, ಮನೆಯ ಮಗನಾಗಿ ಹೀಗೆ ಕೂತಿದ್ದಿಯಲ್ಲೋ ಭರತ, ನೀನೊಬ್ಬ ಸರಿಯಾಗಿದ್ರೆ ಬಂಗಲೆಗೆ ಈ ಗತಿ ಬರ್ತಿತ್ತಾ?...' ಎನ್ನುತ್ತಾ ಗಳಗಳನೆ ಅತ್ತರು ಕಲಾವತಿ.

ಒಮ್ಮೆ ಅವರತ್ತ ನೋಡಿದ ಭರತ. ಅವರ ಮಾತುಗಳಿಗೂ ತನಗೂ ಸಂಬಂಧವೇ ಇಲ್ಲವೆಂಬಂತೆ ಶೂನ್ಯದತ್ತ ದೃಷ್ಟಿ ನೆಟ್ಟ. ಅವನೊಂದಿಗೆ ಇನ್ನು ಯಾವ ಮಾತನ್ನೂ ಆಡಿ ಪ್ರಯೋಜನವಿಲ್ಲವೆಂಬುದನ್ನು ಅರಿತ ಕಲಾವತಿ ಬಂಗಲೆಯೊಳಕ್ಕೆ ನಡೆದರು. ಅಂತೂ ಕೋಟೆ ಬಂಗಲೆ ದೊಡ್ಡದೊಂದು ಅಪಾಯದಿಂದ ಪಾರಾಗಿತ್ತು. ಬಂಗಲೆಯ ಗೋಡೆಗಳು ಬಿಸಿಯಾಗಿದ್ದು ಬಿಟ್ಟರೆ ಮತ್ತಾವ ಅಪಾಯವೂ ಅದಕ್ಕೆ ಆಗಿರಲಿಲ್ಲ.

'ಇಷ್ಟು ವರ್ಷದಲ್ಲಿ ಯಾವತ್ತೂ ಕೂಡಾ ಕೋಟೆ ಬಂಗಲೆ ಇಂಥ ಸಂಕಟದಲ್ಲಿ ಸಿಲುಕಿರ್ಲಿಲ್ಲ, ಏನಾದ್ರೂ ಅನಾಹುತವಾಗಿದ್ರೆ....ಸದ್ಯ ಬಚಾವಾದೆವು....' ಕಲಾವತಿ ಬಂಗಲೆಯಲ್ಲಿ ಎಲ್ಲರೊಂದಿಗೆ ಕುಳಿತು ದಣಿವಾರಿಸಿಕೊಳ್ಳುವಾಗ ಹೇಳಿದಳು.

'ನಮ್ಮ ಚಂದ್ರಪ್ಪನಿರುವಾಗ ಅದು ಹೇಗೆ ಇಂಥ ಅನಾಹುತವಾಯ್ತು ಅಂತಾನೇ ಅರ್ಥ ಆಗ್ತಿಲ್ಲ, ಬಂಗಲೆಯ ಪೂರ್ತಿ ಜವಾಬ್ದಾರಿಯನ್ನು ಹೊತ್ತಿರುವ ಅವ್ನು ಹೀಗೆ ಬೆಂಕಿ ಆಕಸ್ಮಿಕ ನಡೆಯಲು ಬಿಟ್ಟಿದ್ದಾನೆಂದ್ರೆ....' ಪುರುಷೋತ್ತಮರು ಬೇಸರದಿಂದ ಹಣೆಯುಜ್ಜಿಕೊಂಡರು.

ದಂಪತಿಗಳ ಮಾತುಗಳನ್ನು ಮೌನವಾಗಿ ಕೇಳುತ್ತಾ ಕುಳಿತರು ಋತು ಹಾಗೂ ರಮ್ಯ. ನಡೆದ ವಿದ್ಯಮಾನ ಇಬ್ಬರಿಗೂ ಆಶ್ಚರ್ಯವನ್ನುಂಟು ಮಾಡಿತ್ತು. ಋತುವಿನ ಮೈ ನಡುಕವಿನ್ನೂ ಪೂರ್ತಿಯಾಗಿ ನಿಂತಿರಲಿಲ್ಲ. ಅಷ್ಟರಲ್ಲಿ ಹೇಮಂತ ಅವಳ ಮೊಬೈಲಿಗೆ ಕರೆ ಮಾಡಿದ್ದ. ಬೆಳಿಗ್ಗೆ ಬರುವುದಿಲ್ಲವೆಂಬ ಚುಟುಕು ಸಂದೇಶವೊಂದನ್ನು ಕಳುಹಿಸಿದ್ದವನು ಈಗ ಬಿಡುವು ಮಾಡಿಕೊಂಡು ಕರೆ ಮಾಡುತ್ತಿದ್ದಾನೆ....

'ಹೇಮಂತ್, ನಾನು ಆಮೇಲೆ ನಿನ್ನ ಹತ್ರ ಮಾತಾಡ್ತೀನಿ....' ಎಂದವಳೇ ಡಿಸ್‌ಕನೆಕ್ಟ್ ಮಾಡಿದಳು ಋತು. ರಾತ್ರಿ ಮಲಗುವಾಗ ಯಾವ ಆತಂಕವೂ ಇಲ್ಲದೆ ಅವನೊಂದಿಗೆ ಮಾತನಾಡುವ ಯೋಚನೆ ಅವಳದು.

'ಯಾರು ಋತು, ಹೇಮಂತ ಫೋನ್ ಮಾಡಿದ್ದಾ?..' ಚಿಕ್ಕಮ್ಮನ ಪ್ರಶ್ನೆಗೆ ಹೌದೆನ್ನುವಂತೆ ತಲೆಯಾಡಿಸಿದಳು.

'ಋತು....ನಾನೊಂದು ವಿಷ್ಯ ಹೇಳ್ತೀನಿ ತಪ್ಪು ತಿಳೀಬೇಡ, ಹೇಮಂತ ಈ ಬಂಗಲೆಯ ಅಳಿಯ ಎಂದಾದ ಮೇಲೆ ಏಕೋ ಶಕುನಗಳು ಒಂದೂ ಸರಿ ಬರ್ತಿಲ್ಲ, ನಿನ್ನೆ ಅವ್ನು ಬಂಗಲೆಗೆ ಅಡಿಯಿಡುವ ಹೊತ್ತಿಗೆ ಎಂದೂ ಕಾಣಿಸದ ಕಪ್ಪು ಬೆಕ್ಕು ಬಂದು ದೇವರ ಮುಂದಿದ್ದ ಹಾಲನ್ನು ಚೆಲ್ಲಿಬಿಡ್ತು.. ಇವತ್ತು ನೋಡಿದ್ರೆ ಬಂಗಲೆಯ ಸಂಪಿಗೆ ಮರಕ್ಕೆ ಬೆಂಕಿ ಬಿದ್ದಿದೆ....ನಂಗ್ಯಾಕೋ ಭಯವಾಗ್ತಿದೆ ಋತು, ಈ ಬಂಗ್ಲೆ ಎಂತೆಂಥ ಅನಾಹುತಗಳನ್ನು ಎದುರಿಸಿದೆ ಅಂತ ನಿಂಗೇ ಗೊತ್ತು....ನಿನಗೇನಾದ್ರೂ ಬಂಗಲೆಯ ಬಗ್ಗೆ, ಬಂಗಲೆಯ ಜನಗಳ ಬಗ್ಗೆ ನಿಜವಾಗ್ಲೂ ಕಾಳಜಿ ಇದ್ರೆ ಹೇಮಂತನನ್ನು ಮರೆತುಬಿಡು ಋತು..'

ಕಡ್ಡಿ ತುಂಡು ಮಾಡಿದಂತೆ ಕಲಾವತಿ ಮೊನಚಾಗಿ ಮಾತನಾಡಿದಾಗ ಅವರನ್ನೇ ಆಶ್ಚರ್ಯದಿಂದ ನೋಡಿದಳು ಋತು. ಎಂದೂ ಇಷ್ಟು ಕಠಿಣವಾಗಿ ತನ್ನೊಂದಿಗೆ ಮಾತನಾಡಿರದ ಅವರ ಈ ನಡವಳಿಕೆಯಿಂದ ತಬ್ಬಿಬ್ಬಾಗಿ ಗೆಳತಿ ರಮ್ಯಳತ್ತ ನೋಡಿದಳು. ಅವಳ ಮುಖದಲ್ಲೂ ಇದೇ ಭಾವನೆಯಿತ್ತು.

'ಎಂಥ ಮಾತೂಂತ ಆಡ್ತಿಯಾ ಕಲಾವತಿ, ಇಷ್ಟು ವರ್ಷ ಮದುವೆಯನ್ನು ಮುಂದು ಹಾಕುತ್ತಲೇ ಬಂದ ಋತು ಈಗ ಮೆಚ್ಚಿದವನ ಕೈ ಹಿಡೀತಿದ್ದಾಳೆ, ಇಂಥ ಸಂದರ್ಭದಲ್ಲಿ ಶಕುನ, ಅದು ಇದೂಂತ ಹೇಳಿ ಅವಳ ಭ್ಯೂಚರನ್ನು ಹಾಳು ಮಾಡ್ಬೇಡ ನೀನು, ಲೈಫ್ ಅಂದ್ರೆ ಇವೆಲ್ಲಾ ಇದ್ದೇ ಇರುತ್ತೆ, ಒಳ್ಳೆಯದು ಕೆಟ್ಟದ್ದು ಎಲ್ಲಾ ನೆರಳು ಬೆಳಕಿನಂತೆ ಬರುತ್ತಲೇ ಇರುತ್ತೆ, ಅದಕ್ಕೆಲ್ಲಾ ಹೀಗೆ ಕಂಗೆಟ್ರೆ ಹೇಗೆ....ನೀನು ಹೀಗೆಲ್ಲಾ ಮಾತಾಡ್ಬೇಡ....' ಎಂದು ಪುರುಷೋತ್ತಮರು ಕಲಾವತಿಯನ್ನು ಸುಮ್ಮನಾಗಿಸಲು ನೋಡಿದರು.

'ನಾನು ಸುಮ್ನೆ ಯಾವ ವಿಷಯವನ್ನೂ ಹೇಳಲ್ಲ ಅಂತ ನಿಮ್ಗೇ ಗೊತ್ತಿದೆ, ಋತು ಹೇಮಂತನನ್ನು ಮದ್ವೆಯಾದ್ರೆ ಈ ಬಂಗ್ಲೆ ಸರ್ವನಾಶವಾಗುತ್ತೆ ಅನ್ನೋ ಭಯ ನನ್ನ ಕಾಡ್ತಿದೆ, ಇದಕ್ಕೂ ಮೇಲೆ ಅವ್ಳು ಹೇಮಂತನನ್ನು ಮದ್ವೆಯಾದ್ರೆ ಮುಂದೆ ನಡೆಯುವ ಎಲ್ಲ ಅನಾಹುತಗಳಿಗೂ ಅವಳು ಹೊಣೆಯಾಗ್ತಾಳೆ..' ಎಂದ ಕಲಾವತಿಯ ಮಾತಿಗೆ ಮತ್ಯಾರೂ ಮಾತು ಬೆಳೆಸಲಿಲ್ಲ.

ಆ ರಾತ್ರಿ ಊಟದ ಸಮಯದಲ್ಲೂ ಕಲಾವತಿ ಯಾರೊಂದಿಗೂ ಹೆಚ್ಚು ಮಾತನಾಡಲಿಲ್ಲ. ಸದಾ ವಾಚಾಳಿಯಾಗಿದ್ದ ಚಿಕ್ಕಮ್ಮನ ಈ ಪರಿ ಋತುವಿಗೆ ಹೊಸತು. ಮಾತಿಲ್ಲದೆ ಊಟ ಮುಗಿಸಿ ರಮ್ಯಾಳೊಂದಿಗೆ ತನ್ನ ರೂಮನ್ನು ಸೇರಿದಳು.

ಆ ರಾತ್ರಿ ಹಾಲು ಕೊಟ್ಟು ಗುಡ್‌ನೈಟ್ ಹೇಳುವುದಕ್ಕೂ ಕಲಾವತಿ ಬರಲಿಲ್ಲ.

ಹಾಗಾದರೆ ತನ್ನೊಂದಿಗೆ ಚಿಕ್ಕಮ್ಮನ ಶೀತಲ ಯುದ್ಧ ಆರಂಭವಾಗಿದೆಯೇ?.....ತನ್ನನ್ನೇ ಪ್ರಶ್ನಿಸಿಕೊಂಡಳು ಋತು. ಆ ರಾತ್ರಿ ಎಂದಿನಂತೆಯೇ ಗೆಳತಿಯರಿಬ್ಬರೂ ಮಾತಿಗೆ ತೊಡಗಿದ್ದರು.

'ಋತು....ನಂಗೇನೋ ಇವತ್ತು ಕಲಾವತಿ ಆಂಟಿಯ ಮಾತುಗಳನ್ನು ಕೇಳಿ ತುಂಬಾ ಆಶ್ಚರ್ಯ ಆಯ್ತು, ಶಕುನ ಅಂತೆಲ್ಲಾ ಹೇಳಿ ಹೇಮಂತನನ್ನು ನೀನು ಮದ್ವೆಯಾಗುವ ವಿಷ್ಯದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಅಂದ್ರೆ ನಂಗೆ ನಂಬೋಕೇ ಆಗ್ತಿಲ್ಲ...'

'ರಮ್ಯ....ಚಿಕ್ಕಮ್ಮ ಮೊದಲಿನಿಂದ್ಲೂ ಯಾವುದಕ್ಕೆ ಯಾವುದನ್ನೋ ತಾಳೆ ಹಾಕೋದಿಕ್ಕೆ ಕಲ್ತಿದ್ದಾಳೆ, ಇಷ್ಟು ದಿನ ನಮ್ಮ ಎಲ್ಲಾ ದುಸ್ಥಿತಿಗೂ ಈ ಕೋಟೆ ಬಂಗ್ಲೇನೇ ಕಾರಣ ಅಂತಿದ್ಳು, ಈಗ ಹೇಮಂತನೇ ಕಾರಣ ಅಂತಿದ್ದಾಳೆ, ಅವ್ಳ ಸ್ವಭಾವ ನಂಗೊತ್ತು, ಒಂದೆರಡು ದಿನಕ್ಕೆ ಅವ್ಳೇ ನನ್ನನ್ನು ಸಾರಿ ಕೇಳ್ತಾಳೆ ನೋಡ್ತಿರು....' ಎಂದಳು ಋತು.

'ನಂಗೆ ಹಾಗೆ ಅನ್ನಿಸ್ತಿಲ್ಲ ಋತು, ಕಲಾವತಿ ಆಂಟಿಯ ಮಾತಿನಂತೆಯೇ ಬರೋದಾದ್ರೆ ಹೇಮಂತ ಈ ಬಂಗಲೆಗೆ ಅಡಿಯಿಟ್ಟಾಗಲೇ ದೇವರ ಮನೆಯಲ್ಲಿ ಕಪ್ಪು ಬೆಕ್ಕು ಕಾಣಿಸಿಕೊಂಡಿದೆ, ರಾತ್ರಿ ನೀನು ಹೇಮಂತ ಟೆರೇಸಿನಲ್ಲಿ ಏಕಾಂತವಾಗಿರೋವಾಗ ಯಾರೋ ನಿಮ್ಮನ್ನು ಗಮನಿಸಿದ್ರು ಅಂತ ನೀನೇ ಹೇಳಿದ್ದಿ, ಈಗ ನೋಡಿದ್ರೆ ಬಂಗಲೆಯ ಸಂಪಿಗೆ ಮರ ಬೆಂಕಿಯಿಂದ ಸುಟ್ಟು ಕರಕಲಾಗಿದೆ, ಇವೆಲ್ಲ ಏನನ್ನು ತೋರ್ಸುತ್ತೆ ಹೇಳು ಋತು....'

'ಏನನ್ನು ತೋರ್ಸುತ್ತೆ, ನಂಗೇನೂ ಅರ್ಥವಾಗ್ತಿಲ್ಲ....' ಎಂದಳು ಋತು.

'ನಂಗೆಲ್ಲಾ ಅರ್ಥವಾಗ್ತಿದೆ....ನೀನು ಹೇಮಂತನನ್ನು ಮದ್ವೆಯಾಗ್ತಿರೋದು ಬಂಗಲೆಯಲ್ಲಿ ಯಾರಿಗೋ ಇಷ್ಟವಿಲ್ಲ, ಅದಕ್ಕಾಗಿ ಇಂಥ ಪ್ರಕರಣಗಳನ್ನು ಬಂಗಲೆಯಲ್ಲಿ ಯಾರೋ ಸೃಷ್ಟಿಸ್ತಿದ್ದಾರೆ ಅಂತ ನನಗನ್ನಿಸ್ತಿದೆ...'

'ಆದ್ರೆ ಯಾಕೆ ರಮ್ಯ, ಅದರ ಅಗತ್ಯ ಈಗ ಯಾರಿಗಿದೆ ಹೇಳು, ನಿನ್ನ ಮಾತನ್ನು ನಂಬೋದಿಕ್ಕೆ ನಾನು ತಯಾರಿಲ್ಲ...' ಎಂದಳು ಋತು.

'ಹೇಮಂತನೆಂದಂತೆ ನಿನ್ನ ಚಿಕ್ಕಮ್ಮನ ಮೇಲೂ ಅನುಮಾನಪಡಲು ಕಾರಣಗಳಿವೆ ಅಂತ ನನಗನ್ನಿಸ್ತಿದೆ ಋತು, ಇವತ್ತು ನೋಡು, ಶಕುನ ಅಂತೆಲ್ಲಾ ಹೇಳಿ ನಿನ್ನ, ಹೇಮಂತನ ಮದ್ವೆಗೆ ಚಿಕ್ಕಮ್ಮ ಆಕ್ಷೇಪ ಎತ್ತಿದ್ರು, ಅದಕ್ಕಾಗಿ ಅವರೇ ಈ ನಾಟಕ ಆಡ್ತಿರಬಹುದಾ?' ರಮ್ಯಳ ಮಾತಿಗೆ ಋತು ಬೆಚ್ಚಿದಳು! ಚಿಕ್ಕಮ್ಮ ಹೀಗೆಲ್ಲಾ ಮಾಡುತ್ತಾಳೆಯೇ? ಚಿಕ್ಕಂದಿನಿಂದ ತಾಯಿಯಂತೆ ತನ್ನನ್ನು ಸಲಹಿದವಳು ತನ್ನ ಭವಿಷ್ಯಕ್ಕೆ ಮುಳುವಾಗುತ್ತಾಳೆಯೇ? ಅದನ್ನು ಒಪ್ಪಿಕೊಳ್ಳಲು ಅವಳ ಮನಸ್ಸು ಸಿದ್ಧವಾಗಲಿಲ್ಲ.

**(ಸಶೇಷ)**